# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 491

ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 19.07.2024.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಎಷ್ಟು ಗ್ರಾಮ ಪಂಚಾಯತ್ ಕಛೇರಿಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ; | 1. **ಚಾಮರಾಜನಗರ:** ಜಿಲ್ಲೆಯ ಒಟ್ಟು 130 ಗ್ರಾಮ ಪಂಚಾಯಿತಿಗಳಿದ್ದು, ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ.<br>2. **ಮೈಸೂರು:** ಜಿಲ್ಲೆಯ ಒಟ್ಟು 256 ಗ್ರಾಮ ಪಂಚಾಯಿತಿಗಳ ಪೈಕಿ 238 ಗ್ರಾಮ ಪಂಚಾಯತಿಗಳಲ್ಲಿ ಗ್ರಂಥಾಲಯಗಳಿದ್ದು, 18 ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯ ಸೌಲಭ್ಯವಿರುವುದಿಲ್ಲ. |
| (ಆ) | ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯ ಸೌಲಭ್ಯವಿರುವುದಿಲ್ಲ; | |
| (ಇ) | ಕೂಡಲೇ ಎಲ್ಲಾ ಗ್ರಾಮ ಪಂಚಾಯಿತಿ ಹಾಗೂ ಹೆಚ್ಚು ಜನರಿರುವ ಗ್ರಾಮಗಳಲ್ಲಿ ಗ್ರಂಥಾಲಯ ತೆರೆಯಲು ಸರ್ಕಾರ ಕೈಗೊಳ್ಳುವ ಕ್ರಮವೇನು; | ಕೇಂದ್ರ ಸರ್ಕಾರದ Scheme for Special Assistance to States for Capital Investment ಯೋಜನೆಯ Children and Adolescents Libraries and Digital Infrastructure ಕಾರ್ಯಕ್ರಮದಡಿಯಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 6599 ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸಲು ಪ್ರತಿ ಗ್ರಂಥಾಲಯಕ್ಕೆ ₹ 4.00 ಲಕ್ಷಗಳಂತೆ ಒಟ್ಟು ₹ 263.96 ಕೋಟಿ ಮಂಜೂರಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ಹೊಸ ಗ್ರಂಥಾಲಯಗಳನ್ನು ತೆರೆಯಲು ಕ್ರಮ ವಹಿಸಲಾಗುತ್ತಿದೆ. |
| (ಈ) | ಗ್ರಂಥಾಲಯ ತೆರೆಯಲು ಸರ್ಕಾರ ಹಾಲಿ ಅನುಸರಿಸುತ್ತಿರುವ ಮೊದಲ ಹಂತದ ಕ್ರಮವೇನು? | ಕೇಂದ್ರ ಸರ್ಕಾರದ Scheme for Special Assistance to States for Capital Investment ಯೋಜನೆಯ Children and Adolescents Libraries and Digital Infrastructure ಕಾರ್ಯಕ್ರಮದಡಿಯಲ್ಲಿ ರಾಜ್ಯದಲ್ಲಿ ಗ್ರಂಥಾಲಯ ಹೊಂದಿಲ್ಲದೆ ಇರುವ ಗ್ರಾಮ ಪಂಚಾಯಿತಿಗಳು ಮತ್ತು ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮಗಳಲ್ಲಿ ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರಿ ಕಟ್ಟಡಗಳನ್ನು ಗುರುತಿಸುವಂತೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ದಿನಾಂಕ:01.12.2023 ರಂದು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಪತ್ರವನ್ನು ಅನುಬಂಧ-1ರಲ್ಲಿ ನೀಡಿದೆ.<br><br>ಮಂಜೂರಾದ 6599 ಗ್ರಂಥಾಲಯಗಳ ಪೈಕಿ ಈಗಾಗಲೇ 5433 ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸಲು ಕಟ್ಟಡಗಳನ್ನು |

| | | |
|---|---|---|
| | | ಗುರುತಿಸಲಾಗಿದ್ದು, ಉಳಿದ ಗ್ರಂಥಾಲಯಗಳಿಗೆ ಸ್ಥಳ ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>ಜಿಲ್ಲಾವಾರು ಪಟ್ಟಿ ಅನುಬಂಧ-2ರಲ್ಲಿ ನೀಡಿದೆ.<br><br>ಹೊಸ ಗ್ರಂಥಾಲಯ ಪ್ರಾರಂಭಿಸಲು ಪ್ರತಿ ಗ್ರಂಥಾಲಯಕ್ಕೆ ಮಂಜೂರಾದ ₹ 4.00 ಲಕ್ಷಗಳ ಪೈಕಿ ಈಗಾಗಲೇ ಬಿಡುಗಡೆಯಾಗಿರುವ ಶೇ.50ರಷ್ಟು ಮೊದಲ ಕಂತಿನ ಹಣದಲ್ಲಿ Children and Adolescents Libraries and Digital Infrastructure ಕಾರ್ಯಕ್ರಮದ ಮಾರ್ಗಸೂಚಿಗಳಂತೆ ₹ 2.00 ಲಕ್ಷಗಳ ವೆಚ್ಚದಲ್ಲಿ National Book Trust India, Ministry of Education, Government of India ಇವರಿಂದ ಪ್ರಕಟಗೊಂಡ ಪುಸ್ತಕಗಳನ್ನು ಖರೀದಿಸಲು ಕಾರ್ಯಾದೇಶ ನೀಡಲಾಗಿದ್ದು, ಸಂಸ್ಥೆಯು ಜಿಲ್ಲೆಗಳಿಗೆ ಪುಸ್ತಕಗಳನ್ನು ಸರಬರಾಜು ಮಾಡುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.<br><br>ಪ್ರತಿ ಗ್ರಂಥಾಲಯಕ್ಕೆ ₹ 2.00 ಲಕ್ಷಗಳ ವೆಚ್ಚದಲ್ಲಿ ಕಂಪ್ಯೂಟರ್ ಮತ್ತು ಇತರೆ ಪೀಠೋಪಕರಣಗಳನ್ನು ಖರೀದಿಸಲು ಮಾರ್ಗಸೂಚಿಯಲ್ಲಿ ಅವಕಾಶವಿದ್ದು, ಕೇಂದ್ರ ಸರ್ಕಾರದಿಂದ 2ನೇ ಕಂತಿನ ಅನುದಾನ ಬಿಡುಗಡೆಯಾದ ಕೂಡಲೇ ನಿಯಮಾನುಸಾರ ಅಗತ್ಯ ಪೀಠೋಪಕರಣಗಳನ್ನು ಖರೀದಿಸಿ ಗ್ರಂಥಾಲಯಗಳನ್ನು ಕಾರ್ಯಾರಂಭ ಮಾಡಲಾಗುವುದು. |

ಸಂಖ್ಯೆ: ಗ್ರಾಅಪ 314 ಗ್ರಾಪಂಅ 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಅನುಬಂಧ–1

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು – 560 009.

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ 628/2023 ದಿನಾಂಕ:01.12.2023

ರವರಿಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಕೇಂದ್ರ ಸರ್ಕಾರದ "Scheme for Special Assistance to States for Capital Investment" ಯೋಜನೆಯ ಅಡಿಯಲ್ಲಿ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಗ್ರಂಥಾಲಯಗಳಿಗೆ ಸ್ಥಳ ಗುರುತಿಸುವ ಕುರಿತು

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು "Scheme for Special Assistance to States for Capital Investment" ಯೋಜನೆಯ "Children and Adolescents Libraries and Digital Infrastucture" ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದಲ್ಲಿ ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿರುತ್ತದೆ.

ಅದರಂತೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಗ್ರಂಥಾಲಯ ಇರುವ ಗ್ರಾಮಗಳನ್ನು ಹೊರತುಪಡಿಸಿ, ಇತರೆ ಗ್ರಾಮಗಳಲ್ಲಿ ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸ್ಥಳಗಳನ್ನು ಗುರುತಿಸಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ಪ್ರಸ್ತುತ ಗ್ರಾಮ ಪಂಚಾಯತಿ ಗ್ರಂಥಾಲಯವು ಇರುವ ಗ್ರಾಮವನ್ನು ಹೊರತುಪಡಿಸಿ ಬೇರೆ ಗ್ರಾಮಗಳಲ್ಲಿ ಹೊಸದಾಗಿ ಗ್ರಂಥಾಲಯವನ್ನು ಪ್ರಾರಂಭಿಸಲು ಕಟ್ಟಡಗಳನ್ನು ಗುರುತಿಸಬೇಕು.
2. ಕಟ್ಟಡಗಳನ್ನು ಗುರುತಿಸುವಾಗ ಸರ್ಕಾರಿ ಕಟ್ಟಡ/ಸಮುದಾಯ ಭವನ ಕಟ್ಟಡಗಳಿಗೆ ಮೊದಲ ಆದ್ಯತೆ ನೀಡಬೇಕು.
3. ಸರ್ಕಾರಿ ಕಟ್ಟಡ/ಸಮುದಾಯ ಭವನ ಕಟ್ಟಡಗಳು ಲಭ್ಯವಿಲ್ಲದ ಸಂದರ್ಭಗಳಲ್ಲಿ ಪಂಚಾಯತಿ ವ್ಯಾಪ್ತಿಯ ಅತಿ ದೊಡ್ಡ ಸರ್ಕಾರಿ ಶಾಲೆಯಲ್ಲಿ (ಪ್ರಸ್ತುತ ಗ್ರಂಥಾಲಯ ಇರುವ ಗ್ರಾಮದ ಶಾಲೆಯನ್ನು ಹೊರತುಪಡಿಸಿ) ಹೊಸ ಗ್ರಂಥಾಲಯ ಪ್ರಾರಂಭಿಸಲು ಲಭ್ಯವಿರುವ ಕಟ್ಟಡಗಳನ್ನು ಗುರುತಿಸಬೇಕು.
4. ಸರ್ಕಾರಿ ಕಟ್ಟಡಗಳು, ಸಮುದಾಯ ಭವನ ಮತ್ತು ಶಾಲಾ ಕಟ್ಟಡ ಲಭ್ಯವಿಲ್ಲದ ಸಂದರ್ಭಗಳಲ್ಲಿ ಇತರೆ ಖಾಸಗಿ ಕಟ್ಟಡಗಳನ್ನು ಗ್ರಂಥಾಲಯ ಉದ್ದೇಶಕ್ಕಾಗಿ ದಾನಿಗಳಿಂದ ಒಪ್ಪಂದದ ಮೇರೆಗೆ ಪಡೆಯಲು ಕ್ರಮ ವಹಿಸಬಹುದು.
5. ಗ್ರಂಥಾಲಯ ಪ್ರಾರಂಭಿಸಲು ಉದ್ದೇಶಿಸಿರುವ ಕಟ್ಟಡವು ವಸತಿ ಪ್ರದೇಶಕ್ಕೆ ಹತ್ತಿರದಲ್ಲಿ ಇರಬೇಕು.

6. ಗುರುತಿಸಲಾದ ಕಟ್ಟಡವು ಸುಸ್ಥಿತಿಯಲ್ಲಿ ಇರಬೇಕು ಹಾಗೂ ಉತ್ತಮ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಹೊಂದಿರಬೇಕು.

ಪ್ರತಿ ಜಿಲ್ಲೆಯಲ್ಲಿ ಗುರುತಿಸಬೇಕಾದ ಹೊಸ ಗ್ರಂಥಾಲಯಗಳ ಗುರಿಯನ್ನು ಅನುಬಂಧ-01 ರಲ್ಲಿ ಲಗತ್ತಿಸಿದೆ. ತಮ್ಮ ಜಿಲ್ಲೆಗೆ ನಿಗದಿಪಡಿಸಲಾದ ಗುರಿಗೆ ಅನುಗುಣವಾಗಿ ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸಲು ಕಟ್ಟಡಗಳನ್ನು ಗುರುತಿಸಿ, ಅನುಬಂಧ-2 ರಲ್ಲಿ ಲಗತ್ತಿಸಿದ ನಮೂನೆಯಲ್ಲಿ ದಿನಾಂಕ:15-12-2023ರೊಳಗಾಗಿ ಈ ಕಚೇರಿಗೆ ಪಟ್ಟಿಯನ್ನು ಸಲ್ಲಿಸಲು ಸೂಚಿಸಿದೆ.

(ಟಿಪ್ಪಣಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್)
ರವರಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ವಿಶ್ವಾಸಿ

ಆಯುಕ್ತರು
ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯರವರ ಆಪ್ತ ಸಹಾಯಕರು

ಅನುಬಂಧ - 1

# PROPOSED NEW LIBRARIES

| Sl No | Distreit | Total no of Schools in Rural Area | Total No of New Libraries to be Identified |
|---|---|---|---|
| 1 | BAGALAKOTE | 1157 | 190 |
| 2 | BALLARI | 540 | 90 |
| 3 | BELAGAVI | 2871 | 480 |
| 4 | BANGALORE RURAL | 1006 | 165 |
| 5 | BANGALORE URBAN | 705 | 120 |
| 6 | BIDAR | 1295 | 215 |
| 7 | CHAMARAJANAGAR | 757 | 125 |
| 8 | CHIKKABALLAPURA | 1450 | 240 |
| 9 | CHIKKAMAGALURU | 1313 | 220 |
| 10 | CHITRADURGA | 1616 | 270 |
| 11 | DAKSHINA KANNADA | 908 | 150 |
| 12 | DAVANAGERE | 1046 | 175 |
| 13 | DHARWAD | 601 | 100 |
| 14 | GADAG | 538 | 90 |
| 15 | HASSAN | 2338 | 390 |
| 16 | HAVERI | 1148 | 190 |
| 17 | KALBURGI | 1803 | 300 |
| 18 | KODAGU | 408 | 70 |
| 19 | KOLAR | 1770 | 295 |
| 20 | KOPPALA | 939 | 155 |
| 21 | MANDYA | 1661 | 275 |
| 22 | MYSORE | 1861 | 310 |
| 23 | RAICHUR | 1366 | 230 |
| 24 | RAMANAGAR | 1180 | 200 |
| 25 | SHIVAMOGGA | 1744 | 290 |
| 26 | TUMKUR | 3332 | 555 |
| 27 | UDUPI | 625 | 105 |
| 28 | UTTARA KANNADA | 1955 | 325 |
| 29 | VIJAYANAGAR | 891 | 150 |
| 30 | VIJAYAPURA | 1669 | 280 |
| 31 | YADGIR | 889 | 150 |
| TOTAL | | 41382 | 6900 |

ಅನುಬಂಧ-02

## ಹೊಸದಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಕಟ್ಟಡಗಳನ್ನು ಗುರುತಿಸಲಾದ ವಿವರ

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯತಿ ಹೆಸರು | ಗ್ರಾಮದ ಹೆಸರು | ಸರ್ಕಾರಿ ಕಟ್ಟಡ/ಸಮುದಾಯ ಭವನ/ಸರ್ಕಾರಿ ಶಾಲೆ ಹೆಸರು | ಷರಾ |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |

ಅನುಬಂಧ - 6

## ಹೊಸ ಗ್ರಂಥಾಲಯಗಳಿಗೆ ಸ್ಥಳ ಗುರುತಿಸುವುದು.

| ಕ. ಸಂ | ಜಿಲ್ಲಾ | ಗುರಿ | ಗುರುತಿಸಲಾದ ಹೊಸ ಗ್ರಂಥಾಲಯಗಳು |
|---|---|---|---|
| 1 | ಬಾಗಲಕೋಟೆ | 180 | 172 |
| 2 | ಬಳ್ಳಾರಿ | 89 | 89 |
| 3 | ಬೆಂಗಳೂರು ನಗರ | 120 | 120 |
| 4 | ಬೆಂಗಳೂರು( ಗ್ರಾ) | 165 | 165 |
| 5 | ಬೆಳಗಾವಿ | 470 | 169 |
| 6 | ಬೀದರ್ | 205 | 195 |
| 7 | ಚಾಮರಾಜನಗರ | 125 | 125 |
| 8 | ಚಿಕ್ಕಬಳ್ಳಾಪುರ | 230 | 103 |
| 9 | ಚಿಕ್ಕಮಗಳೂರು | 210 | 169 |
| 10 | ಚಿತ್ರದುರ್ಗ | 260 | 138 |
| 11 | ದಕ್ಷಿಣ ಕನ್ನಡ | 150 | 150 |
| 12 | ದಾವಣಗೆರೆ | 165 | 165 |
| 13 | ಧಾರವಾಡ | 94 | 86 |
| 14 | ಗದಗ | 90 | 90 |
| 15 | ಹಾಸನ | 380 | 352 |
| 16 | ಹಾವೇರಿ | 191 | 191 |
| 17 | ಕಲ್ಬುರ್ಗಿ | 290 | 229 |
| 18 | ಕೊಡಗು | 60 | 43 |
| 19 | ಕೋಲಾರ | 295 | 295 |
| 20 | ಕೊಪ್ಪಳ | 155 | 155 |
| 21 | ಮಂಡ್ಯ | 275 | 275 |
| 22 | ಮೈಸೂರು | 285 | 231 |
| 23 | ರಾಯಚೂರು | 230 | 230 |
| 24 | ರಾಮನಗರ | 190 | 93 |
| 25 | ಶಿವಮೊಗ್ಗ | 280 | 205 |
| 26 | ತುಮಕೂರು | 475 | 407 |
| 27 | ಉಡುಪಿ | 95 | 33 |
| 28 | ಉತ್ತರ ಕನ್ನಡ | 275 | 218 |
| 29 | ವಿಜಯಪುರ | 280 | 280 |
| 30 | ವಿಜಯನಗರ | 150 | 150 |
| 31 | ಯಾದಗಿರಿ | 140 | 110 |
| ಒಟ್ಟು | | **6599** | **5433** |